ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೬–ಬಿ Part – VI-B	ಬೆಳಗಾವಿ, ಗುರುವಾರ, ೨೬ ಮಾರ್ಚ್, ೨೦೨೬ (ಚೈತ್ರ ೦೫, ಶಕ ವರ್ಷ ೧೯೪೮) Belagavi, Thursday, 26 March, 2026 (Chaitra 05, Shaka Varsha 1948)	ನಂ. ೦೪ No. 04

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳ ಕಛೇರಿ, ವಿಜಯಪುರ

Office of the Deputy Commissioner & District Magistrate, Vijayapura

ದರ್ಬಾರ್‌ಹಾಲ್, ವಿಜಯಪುರ-586101(ಕರ್ನಾಟಕ) | Darbar Hall, Vijayapura – 586101(Karnataka)

Phone No: 08352 – 250021, 250479 | email: deo.bijapur@gmail.com, vijayapurdc@gmail.com

ನಂ:ಚುನಾವಣೆ:ಜಿ.ಪಂ.ತಾ.ಪಂ:ಸಿ.ಆರ್-14/2025-26 ದಿನಾಂಕ:26 /03/2026

ಕರಡು ಅಧಿಸೂಚನೆ

ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:RD 74 LRD 2024 ದಿನಾಂಕ:04/12/2024 ರಡಿ ವಿಜಯಪುರ ಜಿಲೆಯ ತಾಳಿಕೋಟೆ ತಾಲ್ಲೂಕಿನ ಸಾಸನೂರ ಗ್ರಾಮಪಂಚಾಯತಿ ವ್ಯಾಪ್ತಿಯ ಶರಣ ಸೋಮನಾಳ ಗ್ರಾಮವನ್ನು ಬಸವನಬಾಗೇವಾಡಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಮಾನ್ಯ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಜೆಪಿಎಸ್ 2026, ದಿನಾಂಕ:06.03.2026 ರನ್ವಯ ತಾಳಿಕೋಟೆ ತಾಲೂಕಿನ ಕ್ಷೇತ್ರ ವ್ಯಾಪ್ತಿಯ ಶರಣ ಸೋಮನಾಳ ಗ್ರಾಮವನ್ನು ಬಸವನಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮಪಂಚಾಯತಿಗೆ ಸೇರ್ಪಡೆಗೊಳಿಸಿ ಮರು ವಿಂಗಡಿಸಿ ಕರ್ನಾಟಕ ಗ್ರಾಮ ಸ್ವರಾಜ್ಯತ್ತು ಪಂಚಾಯತ್ರಾಜ್ ಅಧಿನಿಯಮ 1993 ರ ಪ್ರಕರಣ 4 ರಂತೆ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿ ನಿರ್ದೇಶಿಸಿದ್ದು ಇರುತ್ತದೆ.

ಮುಂದುವರೆದು, ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ರಾಜ್) ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆರವರ ಅರೆ ಸರ್ಕಾರಿ ಪತ್ರ ದಿನಾಂಕ:07.01.2026ರ ಪತ್ರದಲ್ಲಿ "ನಗರ ಪ್ರದೇಶವಾಗಿ ಪರಿವರ್ತನೆಯಾಗಿ, ಬಾಕಿ ಉಳಿದಂತಹ ಹಾಗೂ ಭೌಗೋಳಿಕವಾಗಿ ನಿರಂತರತೆಯಲ್ಲಿ ಹೊಂದಿರುವ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ಗ್ರಾಮಗಳನ್ನು/ಜನವಸತಿ ಪ್ರದೇಶಗಳನ್ನು ಒಗ್ಗೂಡಿಸಿ ಕರ್ನಾಟಕ ಗ್ರಾಮಸ್ವರಾಜ್ಯತ್ತು ಪಂಚಾಯತ್ರಾಜ್ ಅಧಿನಿಯಮದ ಪ್ರಕರಣ4(1)ರಲ್ಲಿ ನಿಗಧಿಪಡಿಸಿರುವ ಜನಸಂಖ್ಯೆಯನ್ನು ಹೊಂದಿದ್ದರೆ, ಅಂತಹ ಪ್ರದೇಶಗಳನ್ನು ಹೊಸ ಗ್ರಾಮಪಂಚಾಯತಿಯಾಗಿ ಘೋಷಿಸುವುದು. ಭೌಗೋಳಿಕವಾಗಿ ನಿರಂತರತೆ ಅಥವಾ ಜನಸಂಖ್ಯೆಯನ್ನು ಹೊಂದದಿದ್ದಲ್ಲಿ ಅಂತಹ ಪ್ರದೇಶಗಳನ್ನು ಹತ್ತಿರದ ಗ್ರಾಮಪಂಚಾಯಿತಿಗಳಿಗೆ ಸೇರಿಸಿ ಪುನರ್ರಚಿಸಿದ ಗ್ರಾಮಪಂಚಾಯತಿಯನ್ನು ಅಧಿನಿಯಮದ ಪ್ರಕರಣ4 ರಡಿಯಲ್ಲಿ ಘೋಷಿಸತಕ್ಕದ್ದು ಎಂದು ಆದೇಶ ನೀಡಲಾಗಿರುತ್ತದೆ. ನ್ಯಾಯಾಲಯದ ನಿಂದನಾ ಅರ್ಜಿ ಸಂಖ್ಯೆ:534/2024 C/W 1151/2023 ಮತ್ತು 1152/2023 ಬಾಕಿ ಇರುವುದರಿಂದ, ಸಮಯದ ಅಭಾವದ ಕಾರಣ ಕರಡು ಅಧಿಸೂಚನೆ ಮೇಲಿನ ಆಕ್ಷೇಪಣೆಯನ್ನು 07 ದಿನಗಳಿಗೆ ಸೀಮಿತಗೊಳಿಸಿ ಆಹ್ವಾನಿಸತಕ್ಕದ್ದು ಎಂದು ನಿರ್ದೇಶಿಸಲಾಗಿದ್ದು ಇರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ಯತ್ತು ಪಂಚಾಯತರಾಜ್ ಅಧಿನಿಯಮ, 1993ರ 4ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಡಾ||ಆನಂದ್. ಕೆ. ಭಾ.ಆ.ಸೇ. ವಿಜಯಪುರ ಜಿಲ್ಲೆಯ ಜಿಲ್ಲಾಧಿಕಾರಿ** ಆದ ನಾನು ತಾಳಿಕೋಟೆ ತಾಲ್ಲೂಕಿನ ಈ ಕೆಳಗಿನ ಗ್ರಾಮಪಂಚಾಯತಿಗಳನ್ನು ಮರುವಿಂಗಡಿಸಿ ಈ ಕೆಳಕಂಡ ಕೋಷ್ಟಕದ 4ನೇ ಅಂಕಣದಲ್ಲಿ ನಿರ್ಧಿಷ್ಟಪಡಿಸಿರುವ ಗ್ರಾಮಗಳನ್ನು 3ನೇ ಅಂಕಣದ ಗ್ರಾಮಪಂಚಾಯತಿಯ ವ್ಯಾಪ್ತಿಗೆ ಒಳಪಡುತ್ತವೆ ಎಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕೋಷ್ಟಕ

ಕ್ರ. ಸಂ	ತಾಲೂಕಿನ ಹೆಸರು	ಗ್ರಾಮ ಪಂಚಾಯತಿಯ ಹೆಸರು ಮತ್ತು ಕೇಂದ್ರ ಸ್ಥಾನ	ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು
1	2	3	4
1	ತಾಳಿಕೋಟೆ	ಸಾಸನೂರ	ಸಾಸನೂರ ಚಬನೂರ

ಪ್ರಯಕ್ತ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 4ನೇ ಪ್ರಕರಣದ 2ನೇ ಉಪ-ಪ್ರಕರಣದಂತೆ ಈ ಅಧಿಸೂಚನೆಯಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಕಾರಣ ಸಹಿತವಾಗಿ ದಿನಾಂಕ:02.04.2026 ರ ಒಳಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರರವರಿಗೆ ಸಲ್ಲಿಸಬಹುದಾಗಿದೆಯೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

(ಡಾ|| ಆನಂದ. ಕೆ., ಭಾ.ಆ.ಸೇ)
ಜಿಲ್ಲಾಧಿಕಾರಿ
ವಿಜಯಪುರ ಜಿಲ್ಲೆ, ವಿಜಯಪುರ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E